# ಹೂದೋಟ

‘ಭೂಮಿಯ ಮೇಲೆ ದೇವರು ಮೊದಲು ಸೃಷ್ಟಿಸಿ ಬೆಳೆಸಿದ್ದು ಹೂದೋಟವನ್ನು’ ಎನ್ನುತ್ತಾನೆ ಫ್ರಾನ್ಸಿಸ್ ಬೇಕನ್. ಹೌದು ಜಗತ್ತಿನ ಎಲ್ಲ ಕವಿಗಳೂ, ಪ್ರೇಮಿಗಳೂ ಒಲುಮೆಯ ಹೂದೋಟಗಳ ಮೂಲಕವೇ ಹಾಯ್ದು ಬಂದವರು. ಹೂವುಗಳು ಮಣ್ಣಿಗೆ ಬೇರಿಳಿಸಿ, ಮಣ್ಣಿಗೂ ಒಂದು ವಾಸನೆ ಬರುವಂತೆ ಮಾಡುವುದಲ್ಲದೆ, ಗಾಳಿಯನ್ನು ಅತ್ಯಂತ ಸುಗಂಧಭರಿತವಾಗಿ ಬೀಸುವಂತೆ ನೋಡಿಕೊಳ್ಳುತ್ತವೆ. ‘ಹೂದೋಟ’ಗಳಿಗೆ ಹಲವು ರೂಪಾತ್ಮಕವಾದ ಅರ್ಥಗಳೂ ಇವೆ. ಸನ್ನಿವೇಶಕ್ಕೆ ಅನುಗುಣವಾಗಿ ಭಕ್ತಿ, ಪ್ರೇಮ ಮತ್ತು ಬಹುತ್ವದ ಸಂಕೇತದ ಅರ್ಥವನ್ನೂ ಪಡೆದುಕೊಂಡಿವೆ. ಕುವೆಂಪು ಅವರ ಪ್ರಖ್ಯಾತವಾದ ಕವಿತೆಯ ಸಾಲು ‘ಸರ್ವ ಜನಾಂಗದ ಶಾಂತಿಯ ತೋಟ’ ಎಂಬುದು ಸಾಮರಸ್ಯ ಮತ್ತು ಸಹಿಷ್ಣುತೆಯ ಅರ್ಥದಲ್ಲಿಯೇ ಸುಭಾಷಿತದಂತೆ ನಮ್ಮ ನಡುವೆ ಜೀವಿಸುತ್ತಿದೆ.

ಭಕ್ತರಿಗಾಗಿಯೇ ಹೂದೋಟವನ್ನು ಬೆಳೆಸುತ್ತಿದ್ದ ಉದಾರ ಕಾರ್ಯವೂ ಈಗ್ಗೆ 50–60 ವರ್ಷಗಳ ಹಿಂದೆ ನಮ್ಮ ನಡುವೆ ಎಲ್ಲೆಡೆಯಲ್ಲಿಯೂ ಇತ್ತು. ಹೂವಿನ ಗಿಡಗಳನ್ನು ಬೆಳೆಸಲೆಂದೇ ಅವರು ತಮ್ಮ ತೋಟಗಳಲ್ಲಿ ಒಂದು ಪಾಲನ್ನು ಮೀಸಲಾಗಿರಿಸಿಕೊಂಡಿದ್ದರು. ಶನಿವಾರ ಮತ್ತು ಸೋಮವಾರ ದಿನಗಳಂದು ಮಾತ್ರ ಎಲ್ಲರಿಗೂ ಹೂ ಕೀಳಲು ಅವಕಾಶ ಕೊಡುತ್ತಿದ್ದರು. ಉಳಿದ ದಿನಗಳಲ್ಲಿ ಹೂದೋಟಕ್ಕೆ ಯಾರಿಗೂ ಪ್ರವೇಶ ಕೊಡುತ್ತಿರಲಿಲ್ಲ. ಹೂದೋಟವು ಇಂದಿನ ಮಾನವ ನಿರ್ಮಿತ ಕೃತಕ ಉದ್ಯಾನವನದಂತಲ್ಲ! ಹೊರಗಿನ ಏಕತಾನತೆಯಿಂದ ನಮ್ಮನ್ನು ಉಳಿಸುವ ಸ್ವರ್ಗದ ನಂದನವನದಂತೆ ಇತ್ತು. ಬಿಳಿ ಮತ್ತು ತಿಳಿಗೆಂಪು ಬಣ್ಣದ ಕಣಗಿಲೆ, ನಾಲ್ಕಾರು ತರಹದ ದಾಸವಾಳ, ಬಂಗಾರ ಬಣ್ಣದ ಚೆಂಡು ಹೂವು, ಮರಹತ್ತಿ ಕೀಳಬೇಕಾಗಿದ್ದ ಹಳದಿ ಬಣ್ಣದ ಗಂಟೆ ಹೂವು, ಮಿಶ್ರ ಬಣ್ಣದ ಕರ್ಣಕುಂಡಲ, ಹಸಿರು ಪತ್ರೆ, ತೋಟದ ಮೂಲೆಯಲ್ಲಿ ತನ್ನ ತೊಟ್ಟಿನ ಭಾಗದಲ್ಲಿ ನಸುಗೆಂಪಿನಿಂದ ಕೂಡಿದ್ದ ಶ್ವೇತವರ್ಣದ ಹೂಗಳನ್ನೆಲ್ಲಾ ನೆಲಕ್ಕೆ ಮುಡಿಸಿದ್ದ ಪಾರಿಜಾತ, ನಂದಿಬಟ್ಟಲಿನ ಹೂವು, ಪಟಿಕದ ಹೂವು. ತೋಟದ ಒಂದು ಮೂಲೆಯಲ್ಲಿ ಹಚ್ಚ ಹಸುರಿನಿಂದ ತೊನೆದಾಡುತ್ತಿದ್ದ ಬಾಳೆಗಿಡಗಳು, ಜೊತೆಗೆ ಅಲ್ಲಲ್ಲಿ ಹಚ್ಚಹಸುರಿನಿಂದ ಥಳ ಥಳ ಹೊಳೆಯುತ್ತಿದ್ದ ಸಾಮರಸ್ಯದ ಅರಳಿದ ಹೂವುಗಳು, ಸಹಿಷ್ಣುತೆಯ ಮೊಗ್ಗುಗಳು ಇವುಗಳ ನಡುವೆ ಯಾವಾಗಲೂ ಸ್ಫಟಿಕದಂತೆ ಹರಿಯುತ್ತಿದ್ದ ಸ್ವಾತಂತ್ರ್ಯದ ನೀರಿನ ಕಾಲುವೆಗಳು, ಇವುಗಳನ್ನೆಲ್ಲಾ ಎವೆಮುಚ್ಚದೆ ಕಾಯುತ್ತಿದ್ದ ಮಾನವಪ್ರೇಮದ ಬೇಲಿ ಹೀಗೆ ಎಲ್ಲವೂ ವಿವಿಧ ಬಣ್ಣ ಹಾಗೂ ವಿವಿಧ ಆಕಾರಗಳಿಂದ ಕೂಡಿದ್ದ ಭಿನ್ನತೆಗಳ ಹೂದೋಟ ಅದು.

ಇಂತಹ ವೈವಿಧ್ಯದ ತೋಟವನ್ನು ನೋಡಿಯೇ ‘ಯಾವ ದೇಶದ ಹೂವಿದ್ದಾವ ಇವು!’ ಎಂದು ಹೆಸರು ಕಾಣಿಸದ ತತ್ವಪದಕಾರನೊಬ್ಬ ಹಾಡಿದ್ದಾನೆ. ಉದಾರಚರಿತರ ಕರುಣೆಯಿಂದ ನಮಗೆ ಮುಫತ್ತಾಗಿ ದೊರೆತಿದ್ದ ಈ ಸೌಂದರ್ಯದ ತೋಟವು ಸಮಾಜಕ್ಕೆ ದೊರೆತ ಬೆಲೆಕಟ್ಟಲಾಗದ ಉಡುಗೊರೆ ಎಂದು ಜಗತ್ತು ಭಾವಿಸಿತ್ತು. ಸಜ್ಜನರು ಶ್ರಮದಿಂದ ಕಟ್ಟಿದ ಈ ಸಮಾಜವನ್ನು ಆರೋಗ್ಯಕರವಾಗಿ ಉಳಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ.

ಆದರೆ ಸತ್ಯಸಂಗತಿ ಏನೆಂದರೆ, ನಾವು ಹೂದೋಟಗಳಿಗೆ ಎಷ್ಟರಮಟ್ಟಿಗೆ ಕೃತಜ್ಞರಾಗಿದ್ದೇವೆ ಎನ್ನುವುದನ್ನು ಇಂದಿನ ಚರಿತ್ರೆಯೇ ಹೇಳುತ್ತಿದೆ! ಹೂದೋಟಗಳಿಗೆ ಕೃತಜ್ಞತೆ ಹೇಳಲು ನಮಗಿಂತ ಮಿಗಿಲಾದ ಅರ್ಹತೆಯುಳ್ಳ ಜೀವಿಗಳು ಎಂದರೆ, ಅವು ಪಕ್ಷಿಗಳು ಮತ್ತು ಚಿಟ್ಟೆಗಳು. ಪಕ್ಷಿಗಳಿಗೆ ಮತ್ತು ಚಿಟ್ಟೆಗಳಿಗೆ ಹೂದೋಟಗಳೇ ನಿಜವಾದ ತವರುಮನೆ. ಹೂದೋಟವನ್ನು ಅತ್ಯಂತ ಗರಿಷ್ಠ ಪ್ರಮಾಣದಲ್ಲಿ ಚೈತನ್ಯದಾಯಕ ಮತ್ತು ಸುಂದರವಾಗಿಡಲು ಇವುಗಳ ಕೊಡುಗೆ ಅನನ್ಯವಾದದ್ದು. ಹೂದೋಟದ ಇಂತಹುದೇ ಒಂದು ರೂಪಕ ತಮಿಳಿನ ‘ಮಣಿಮೇಖಲೆ’ ಕಾವ್ಯದಲ್ಲಿ ಬರುತ್ತದೆ. ಮಣಿಮೇಖಲೆ ಮತ್ತು ಸುಧಾಮತಿ ಸಂಜೆಯ ಪೂಜೆಗಾಗಿ ಹೂ ತರಲು ಹೊರಡುತ್ತಾರೆ. ಹೊರಡುವ ಮುನ್ನ ಸುಧಾಮತಿಯು ‘ತಂಗಿ ಮಣಿಮೇಖಲೆ, ಹೂ ಕೊಯ್ಯಲು ಯಾವ ಹೂದೋಟಕ್ಕೆ ಹೋಗೋಣ? ಇಳುವಂತಿಗೆ ತೋಟಕ್ಕೆ ಹೋಗೋಣವೆಂದರೆ ಅದು ರಾಜಭವನದ ಬಳಿಯಿದೆ. ನಮ್ಮಂತಹ ಯುವತಿಯವರು ಅಲ್ಲಿಗೆ ಹೋಗುವುದು ಸರಿಯಲ್ಲ’. ಉಯ್ಯಾಲೆ ವನದ ಹೂವುಗಳು ದೇವತೆಗಳಿಗೆ ಮಾತ್ರ ಮೀಸಲು; ಅಲ್ಲಿಗೆ ಮನುಷ್ಯರ ಪ್ರವೇಶವಿಲ್ಲ. ಇನ್ನು ಉಳಿದುದ್ದು ಎಲ್ಲ ಜಾತಿಯ ಜನರು ಒಂದೇ ಕಡೆ ವಾಸಿಸುವ ಊರಿನ ಅಂಚಿಗಿರುವ ಹೋದೋಟ. ಅಲ್ಲಿ ನಮಗೆ ಬೇಕಾದ ಎಲ್ಲಾ ಬಗೆಯ ಹೂಗಳೂ ದೊರಕುತ್ತದೆ. ಅವುಗಳ ಪರಿಮಳ ಮತ್ತು ಬಣ್ಣಗಳೂ ಬಗೆಬಗೆಯಾದದ್ದು. ಕರುಣಾಮಯನಾದ ಬುದ್ಧಭಗವಂತನಿಗೆ ಸೇರಿದ ವನ ಅದು. ವ್ಯಾಕುಲಗೊಂಡ ಮನಸ್ಸಿಗೆ ಶಾಂತಿ ದೊರಕುವುದು ಅಲ್ಲಿಯೇ’ ಎಂದಳು. ಲೌಕಿಕವಾಗಿ ಮತ್ತು ಆಧ್ಯಾತ್ಮಿಕವಾಗಿಯೂ ಕೂಡ ಬಹುತ್ವದ ಸೌಂದರ್ಯವನ್ನು ತಿಳಿಹೇಳುವ ಈ ರೂಪಕವು ‘ಮಣಿಮೇಖಲೆ’ ಕಾವ್ಯವನ್ನು ಮತ್ತು ನಮ್ಮ ಸಮಾಜವನ್ನು ಶೃಂಗರಿಸಿದೆ.

ಆದರೆ ಒಂದು ಕಾಲಕ್ಕೆ ನಮ್ಮ ದೇವರುಗಳಿಗೆಲ್ಲಾ ಹೂ ಕೊಡುತ್ತಿದ್ದ ‘ಹೂದೋಟ’ ಇಂದು ಭೂಮಿಯ ಮೇಲೆ ಇನ್ನೂ ಉಳಿದಿವೆಯೆ? ಹೂದೋಟವಿದ್ದ ಜಮೀನೆಲ್ಲಾ ಹಣವಂತರ ಪಾಲಾಗಿದೆ. ಒಂದು ಊಟದ ತಟ್ಟೆಯಿಡುವಷ್ಟು ಭೂಮಿಗೆ ಅಪರಿಮಿತ ಬೆಲೆಯನ್ನು ಕಟ್ಟಿರುವ ಇಂದಿನ ಸಮಾಜ, ಹೂದೋಟಗಳನ್ನು ನಿರ್ಮಿಸಿದ ಉದಾರಚರಿತರ ನಡೆಗಳನ್ನು ನಂಬುತ್ತದೆಯೆ? ಈ ಚಿತ್ರಣವು ನಮ್ಮ ನಡುವೆ ನಡೆಯುತ್ತಿರುವ ಹಳತು ಮತ್ತು ಹೊಸತರ ಸಂಘರ್ಷವನ್ನು ಹೇಳುವ ವಾಸ್ತವವೂ ಹೌದು. ಈ ನೆನಪಿನೊಂದಿಗೆ ನಮ್ಮ ಹಿಂದಿನದ್ದನ್ನೆಲ್ಲಾ ಯಥಾವತ್ತಾಗಿ ಸ್ವೀಕರಿಸಬೇಕೆಂದು ಹೇಳುವುದು ಉದ್ದೇಶವಲ್ಲ! ಆದರೆ ನಮ್ಮ ಗತದ ಸಮಾಜ ಹೀಗಿತ್ತು ಎಂದು ತಿಳಿಯುವ ಹಕ್ಕು ಎಲ್ಲರಿಗೂ ಇದೆ. ಈ ಅರಿವು ವರ್ತಮಾನದಲ್ಲಿ ನಮ್ಮನ್ನು ಹೆಚ್ಚು ಉದಾತ್ತತೆಯ ಕಡೆಗೆ ಚಲಿಸಲು ತೋರುದೀಪವಾಗಬಹುದು.

ಹಿಂದೆ ನಮ್ಮ ಸಮಾಜದ ನಡುವೆ ಗಾಂಧಿ ಯುಗದ ಉತ್ಕೃಷ್ಟ ಕೊಡುಗೆಗಳಂತೆ, ಹೂದೋಟಗಳು ಇದ್ದವು. ಶ್ರಮಜೀವಿಗಳು ನೀಡಿದ ಈ ಬಗೆಯ ಉಡುಗೊರೆಗಳನ್ನು ಇಂದಿನ ಉಪಭೋಗ ಸಂಸ್ಕೃತಿ ತನ್ನ ಕಾಲಕಸವನ್ನಾಗಿ ಮಾಡಿಕೊಂಡಿದೆ. ಇಂತಹ ಹಲವು ಬಣ್ಣ, ಹಲವು ಪರಿಮಳದ ಹೂದೋಟವನ್ನು ಸವಿದಿರುವ ಕಣ್ಣುಗಳು ಈಗಲೂ ನಮ್ಮ ನಡುವೆ ಇವೆ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಮತಧರ್ಮ ನಮ್ಮಲ್ಲಿ ಪ್ರಜ್ಞಾಪೂರ್ವಕ ವಲಯದಲ್ಲಿ ಮಾಡುವ ಹಾನಿಗಿಂತ ಭೀಕರವಾದುದು ಪ್ರಜ್ಞಾತೀತ ವಲಯದಲ್ಲಿ ಅದು ಮಾಡುವ ಹಾನಿ.
  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ
- ಒಳ್ಳೆಯ ಬರಹಗಾರ ತನ್ನ ವಿರುದ್ಧ ತಾನೇ ಯೋಚಿಸಬಲ್ಲವ. ಕೆಟ್ಟ ಬರಹಗಾರ ತನ್ನನ್ನು ಬಿಟ್ಟರೆ ಇಲ್ಲ ಅಂತ ತಿಳಿದುಕೊಂಡಿರುತ್ತಾನೆ.
  —ಕುವೆಂಪು
- ಸಂಪತ್ತಿಗಿಂತ ಜ್ಞಾನಕ್ಕೆ ಆದ್ಯತೆ ನೀಡಿ, ಏಕೆಂದರೆ ಒಂದು ಕ್ಷಣಿಕ ಇನ್ನೊಂದು ಶಾಶ್ವತ.
  —ಸಾಕ್ರಟೀಸ್
- ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವವನ್ನು ಕಲಿಸುವ ಧರ್ಮವನ್ನು ನಾನು ಇಷ್ಟಪಡುತ್ತೇನೆ.
  —ಅಂಬೇಡ್ಕರ್
- ಅಸ್ತಿತ್ವದ ಸಂಪೂರ್ಣ ರಹಸ್ಯವೆಂದರೆ ಭಯವಿಲ್ಲದಿರುವುದು. ನಿಮಗೆ ಏನಾಗುತ್ತದೆ ಎಂದು ಎಂದಿಗೂ ಭಯಪಡಬೇಡಿ ಯಾರನ್ನೂ ಅವಲಂಬಿಸಬೇಡಿ.
  —ಸ್ವಾಮಿ ವಿವೇಕಾನಂದ
- ಪ್ರಕೃತಿ ಪ್ರತಿಯೊಬ್ಬ ಮನುಷ್ಯನ ಅಗತ್ಯಗಳನ್ನು ಪೂರೈಸುತ್ತದೆಯೇ ಹೊರತು, ಆತನ ದುರಾಸೆಯನ್ನಲ್ಲ.
  —ಮಹಾತ್ಮ ಗಾಂಧಿ